# ‘ರಾವಣನ ಕಿರೀಟ ಕಟ್ಟಿಕೊಳ್ಳುವ ಕನಸಿದೆ



**ಲಕ್ಷ್ಮೀನಾರಾಯಣ**
**ಝೀ ಕನ್ನಡದ ‘ಪುಟ್ಟಕ್ಕನ ಮಕ್ಕಳು’ ಊರಗೌಡ**

◆ **ಫ್ಯೂಡಲ್ ಪಾತ್ರ ಹೇಗೆನಿಸುತ್ತದೆ?**

ನಿರ್ದಿಷ್ಟ ಹೆಸರೇ ಇಲ್ಲದೆ ಇದ್ದರೂ ಪ್ರಮುಖ ಪಾತ್ರವನ್ನು ನಿರ್ವಹಿಸುವ ಶಕ್ತಿ ಊರ ಗೌಡನಿಗೆ ಇದೆ. ಆರಂಭದಿಂದ ಇಂದಿನವರೆಗೂ ತನ್ನತನವನ್ನು ಈ ಪಾತ್ರ ಬಿಟ್ಟುಕೊಟ್ಟಿಲ್ಲ. ಗೌಡರು ಎಂದೇ ಪಾತ್ರ ಪ್ರಸಿದ್ಧಿಯಾಗಿದೆ. ಎಲ್ಲರೂ ನಾಯಕರು ಆಗಲು ಆಗುವುದಿಲ್ಲ. ಹಾಗೆಯೇ ಖಳನಾಯಕರೂ ಆಗಲು ಆಗುವುದಿಲ್ಲ. ಕಥೆ ಎಂಬ ಚಪ್ಪರ ಅಂದಗೊಳ್ಳಲು ಅಂತಹ ಅನೇಕ ಪಾತ್ರಗಳ ಆಸರೆ, ಅಲಂಕಾರ ಅಗತ್ಯ ಇರುತ್ತದೆ. ಕಥೆ ಮುಂದುವರಿಯಬೇಕು ಎಂದರೆ ನಾವೆಲ್ಲ ಇರಲೇಬೇಕಾಗುತ್ತದೆ. ಗೌಡರ ಪಾತ್ರ ಅದ್ಭುತವಾಗಿದೆ. ‘ಪುಟ್ಟಕ್ಕನ ಮಕ್ಕಳ ಗೌಡರಲ್ಲವೇ’ ಎಂದು ಜನ ಗುರುತಿಸುತ್ತಾರೆ. ಪಾತ್ರದ ಬಗ್ಗೆ ಅಭಿಮಾನ ನನಗೂ ಹುಟ್ಟಿದೆ.

◆ **ನಟನೆಯ ಬಗ್ಗೆ ಪ್ರೀತಿ ಮೂಡಿದ್ದು ಹೇಗೆ?**

ಮೂಲತಃ ರೈತ ಕುಟುಂಬದ ಹಿನ್ನೆಲೆಯಿಂದ ಬಂದವನು ನಾನು. ಓದಿನ ನಂತರ ಕೃಷಿಯನ್ನೇ ಮಾಡುತ್ತಿದ್ದೆ. ನನಗೀಗ 60 ವರ್ಷ. ಟಿ.ಎನ್. ಸೀತಾರಾಂ ಅವರ ಧಾರಾವಾಹಿಗಳ ಅಭಿಮಾನಿ ಆಗಿದ್ದೆ. ತಪ್ಪದೇ ಅವರ ಧಾರಾವಾಹಿ ನೋಡುತ್ತಿದ್ದೆ. ಹಾಗೆ ನೋಡುತ್ತಿದ್ದ ನನಗೆ ಪಾತ್ರವನ್ನು ಮಾಡುವ ಆಸೆ ಸುಪ್ತವಾಗಿ ಕಾಡಲು ಶುರುವಾಯಿತು. ಕೃಷ್ಣಪ್ಪ ಎನ್ನುವ ನನ್ನ ಆತ್ಮೀಯ ಸ್ನೇಹಿತರು ಒಮ್ಮೆ ಸೀತಾರಾಂ ಅವರನ್ನು ಪರಿಚಯ ಮಾಡಿಸಿದರು. ನಂತರ ಅವರ ಧಾರಾವಾಹಿಗಳಲ್ಲಿ ನನಗೊಂದು ಪಾತ್ರ ಮೀಸಲಾಗುತ್ತಿತ್ತು. ಸಾಮಾನ್ಯವಾಗಿ ಅವರ ಬಹುತೇಕ ಧಾರಾವಾಹಿಗಳಲ್ಲಿ ರಾಜಕಾರಣಿಯಾಗಿ ಕಾಣಿಸಿಕೊಂಡಿದ್ದೇನೆ. ಆಗಲೇ ನನಗೆ ಅಭಿನಯವನ್ನೇ ಏಕೆ ಮುಂದುವರಿಸಬಾರದು ಎನ್ನುವ ಭಾವನೆ ಬಂತು. ಹಾಗಾಗಿ ಇದನ್ನೇ ಮುಂದುವರಿಸುತ್ತಿದ್ದೇನೆ. ಶಾಲಾ–ಕಾಲೇಜುಗಳಲ್ಲಿ ಸಣ್ಣಪುಟ್ಟ ನಾಟಕಗಳನ್ನು ಆಡಿದ್ದೆ. ಆ ನಂತರ ಆ ಬಗ್ಗೆ ಯಾವತ್ತೂ ಯೋಚನೆಯನ್ನೇ ಮಾಡಲಿಲ್ಲ.

◆ **ನಿಮ್ಮ ಇಷ್ಟದ ಪಾತ್ರ ಯಾವುದು?**

ಕಲರ್ಸ್ ಕನ್ನಡದಲ್ಲಿ ‘ಶಾಂತಂ ಪಾಪಂ’ ಸೀರೀಸ್‌ನಲ್ಲಿ ನಾನು ಇನ್ಸ್‌ಪೆಕ್ಟರ್ ಪಾತ್ರವನ್ನು ನಿರ್ವಹಿಸುತ್ತಿದ್ದೆ. ಅದು ನನಗೆ ತುಂಬ ಹಿಡಿಸಿತ್ತು. ನನ್ನ ದೇಹ ಭಾಷೆ ಮತ್ತು ಗತ್ತಿಗೆ ಹೊಂದಿಕೆಯೂ ಆಗಿತ್ತು. ಅದರ ಕಥೆ ವಾಸ್ತವ ಘಟನೆಗಳನ್ನು ಆಧರಿಸಿರುತ್ತಿತ್ತು. ಆದರೆ ಏಕ ರೂಪ ವಿನ್ಯಾಸ ಅದಕ್ಕೆ ಇರಲಿಲ್ಲ. ಒಟ್ಟಾರೆ ನನಗೆ ಇದೇ ಪಾತ್ರ ಮಾಡಬೇಕು, ಹೀಗೆ ಇರಬೇಕು ಎನ್ನುವ ಬೇಡಿಕೆ ಇಲ್ಲ. ಕಲೆಯನ್ನು ಅಭಿವ್ಯಕ್ತಿಸಲು ಸಾಧನವಾಗುವ ಯಾವುದೇ ಪಾತ್ರ ಆದರೂ ಸೈ. ಈ ಕ್ಷೇತ್ರಕ್ಕೆ ಬಂದಾಗ ನನಗೆ 50 ವರ್ಷ ಆಗಿತ್ತು. ಹಾಗಾಗಿ ನನ್ನ ವಯಸ್ಸಿಗೆ ಸೂಕ್ತ ಆಗುವ ಪಾತ್ರಗಳನ್ನು ಮಾಡುತ್ತಾ ಬಂದಿದ್ದೇನೆ. ಪೌರಾಣಿಕ ಪಾತ್ರಗಳ ಮೇಲೆ ಅಪಾರ ಪ್ರೀತಿ ಇದೆ. ರಾವಣನ ಪಾತ್ರವನ್ನು ಮಾಡಬೇಕು ಎನ್ನುವ ಕನಸು ಈಗಲೂ ಇದೆ. ಅಂತಹ ಅವಕಾಶ ಒಂದು ದಿನ ಬರುತ್ತದೆ ಎನ್ನುವ ನಿರೀಕ್ಷೆ ಇದೆ. ನನ್ನ ಮುಖ ಭಾವಕ್ಕೆ ಆ ಪಾತ್ರ ಸೂಕ್ತ ಆಗಬಹುದು ಎನ್ನುವ ಭಾವನೆ ನನ್ನದು. ಉದಯದ ‘ಗಂಗೆಗೌರಿ’ಯಲ್ಲಿಯೂ ಅಭಿನಯಿಸುತ್ತಿದ್ದೇನೆ.

◆ **ನಟನೆಯ ಜೊತೆಗೆ ಬೇರೆ ಇನ್ನೇನು ಮಾಡುತ್ತೀರಿ.**

ನಟನೆಯ ಆಸೆಯನ್ನು ಯಾವತ್ತೂ ಇಟ್ಟುಕೊಂಡಿರಲಿಲ್ಲ. ಇದೆಲ್ಲ ದೇವರ ಕೊಡುಗೆ ಎಂದೇ ಭಾವಿಸಿದ್ದೇನೆ. ಇದುವರೆಗೆ ಸುಮಾರು 200 ಧಾರಾವಾಹಿಗಳಲ್ಲಿ ಮಾಡಿದ್ದೇನೆ. ಕುಣಿಗಲ್ ತಾಲ್ಲೂಕು, ಯಡಿಯೂರು ಸಮೀಪದ ದೊಡ್ಡಮುಧುರೆ ಗ್ರಾಮದವನು. ಹೈಸ್ಕೂಲ್ ತನಕ ಅಲ್ಲೇ ಓದಿ, ಕಾಲೇಜಿಗೆಂದು ಬೆಂಗಳೂರಿಗೆ ಬಂದೆ. ನನ್ನ ತಂದೆ ಆ ಕಾಲದಲ್ಲಿ ಕನಕಪುರ ರಸ್ತೆಯಲ್ಲಿ ಮೂರು ಎಕರೆ ಜಮೀನು ಮಾಡಿದ್ದರು. ಅದರ ಜವಾಬ್ದಾರಿಯನ್ನು ನನಗೆ ವಹಿಸಿದ್ದರಿಂದ, ಅಲ್ಲೇ ವ್ಯವಸಾಯ ಮಾಡುತ್ತಿದ್ದೆ. ನಮ್ಮ ಜಮೀನಿಗೆ ಸೀತಾರಾಂ ಒಮ್ಮೆ ಭೇಟಿ ನೀಡಿದರು. ಅವರು ಶೂಟಿಂಗ್ ಮನೆ ಕಟ್ಟಿ ತಮಗೆ ಬಾಡಿಗೆಗೆ ಕೊಡಲು ಹೇಳಿದರು. ಆ ನಿಟ್ಟಿನಲ್ಲಿ ಒಂದಿಷ್ಟು ಪ್ರಯತ್ನಿಸಿ ಆ ಕೆಲಸವನ್ನು ಅರ್ಧಕ್ಕೆ ಬಿಟ್ಟೆ. ಅವರ ಒತ್ತಾಸೆಗೆ ಮನೆಯನ್ನು ಪೂರ್ಣ ಮಾಡಬೇಕಾಯಿತು. ಅವರ ಎಲ್ಲ ಧಾರಾವಾಹಿಗಳಿಗೂ ಈ ಮನೆಯನ್ನು ತೆಗೆದುಕೊಂಡಿದ್ದಾರೆ.

ಈಗ ಅದೇ ಮನೆಯಲ್ಲಿ ‘ಪುಟ್ಟಕ್ಕನ ಮಕ್ಕಳು’ ನಡೀತಾ ಇದೆ. ಗ್ರಾಮೀಣ ದೃಶ್ಯದ ಚಿತ್ರೀಕರಣಕ್ಕೆ ಇಲ್ಲಿನ ವಾತಾವರಣ ಸೂಕ್ತವಾಗುವಂತೆ ಮಾಡಿದ್ದೇನೆ. ಝೀ ಕನ್ನಡದ ‘ಭೂಮಿಗೆ ಬಂದ ಭಗವಂತ’ ಮತ್ತು ಕಲರ್ಸ್ ಕನ್ನಡದ ‘ಅಂತರಪಟ’ ಧಾರಾವಾಹಿಗಳೂ ನಮ್ಮ ಜಮೀನಿನಲ್ಲಿರುವ ಮನೆಗಳಲ್ಲೇ ಚಿತ್ರೀಕರಿಸುತ್ತಿದ್ದಾರೆ. ನಿರ್ಮಾಪಕರ ಅಗತ್ಯಕ್ಕೆ ತಕ್ಕಂತೆ ಮನೆಯನ್ನು ಪರಿವರ್ತನೆ ಮಾಡಿಕೊಡುತ್ತೇನೆ. ಸುಮಾರು ವರ್ಷಗಳಿಂದ ಇದೂ ನನ್ನ ಕೆಲಸದಲ್ಲಿ ಒಂದಾಗಿದೆ. ಮಿಕ್ಕ ಜಾಗದಲ್ಲಿ ಈಗಲೂ ಕೃಷಿ ಇದೆ. ತೆಂಗು, ಅಡಿಕೆ, ಬಾಳೆಯನ್ನು ಬೆಳೆಯುತ್ತೇನೆ. ಅಲ್ಲಿಂದ ಬರುವ ಹಣದಲ್ಲಿ ಮನೆ ಖರ್ಚಿಗೆ ಬೇಕಾದಷ್ಟನ್ನು ಮಾತ್ರ ಬಳಸಿ, ಮಿಕ್ಕಿದ್ದನ್ನು ಅಲ್ಲೇ ಹೂಡುತ್ತಿದ್ದೇನೆ. ಅಕ್ಕಪಕ್ಕದಲ್ಲಿ ಲೇಔಟ್ ಮಾಡಿದ್ದಾರೆ. ನನಗೂ ತುಂಬ ಜನ ಕೇಳುತ್ತಿದ್ದಾರೆ. ನಾನು ಆ ದುಡ್ಡಿಗೆ ಆಸೆ ಪಡದೆ, ಈ ಕೆಲಸದಲ್ಲಿಯೇ ತೃಪ್ತಿಯನ್ನು ಕಂಡಿದ್ದೇನೆ.

■ **ರಾಘವೇಂದ್ರ ಕೆ.**